# ಸ್ತನ ಕ್ಯಾನ್ಸರ್

## ಕೇವಲ ಜಾಗೃತಿ ಮಾತ್ರ ನಿಮ್ಮನ್ನು ಉಳಿಸಬಲ್ಲದು

### ನೀಲಿಮಾ ಬದುಕುಳಿದರು, ಆದರೆ ರಜನಿ ಮತ್ತು ದೀಪಾಗೆ ಬಹಳ ತಡವಾಗಿ ಹೋಗಿತ್ತು.

**ಯಾ**ವುದೇ ಪುಸ್ತಕ, ಯಾವ ಶಾಲೆ ಮತ್ತು ಯಾವುದೇ ಆಧ್ಯಾತ್ಮಿಕ ಚಿಂತಕರು ನೀಡಲಾಗದ ಒಳನೋಟವನ್ನು ಇದ್ದಕ್ಕಿದ್ದಂತೆ ಜೀವನದಲ್ಲಿನ ಕೆಲವು ಕ್ಷಣಗಳು ನಮಗೆ ನೀಡುತ್ತವೆ. ಇಂಥ ಕ್ಷಣಗಳನ್ನು ನಮ್ಮ ಸಾಮಾನ್ಯ ಜೀವನದ ಭಾಗ ಎಂದು ಎಣಿಸುತ್ತೇವೆ. ಆನಂತರ ಇದ್ದಕ್ಕಿದ್ದಂತೆ ಅದರಲ್ಲಿ ಒಂದು ಪಾಠ ಇದೆ ಎಂದು ಅರಿತುಕೊಳ್ಳುತ್ತೇವಲ್ಲದೇ, ಇದು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.

ಅಂಥ ಒಂದು ದಿನವನ್ನು ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಇದು ನನ್ನನ್ನು ನಿಜಕ್ಕೂ ಚಿಂತನೆಗೆ ಹಚ್ಚಿತು. ಇದನ್ನು ಎಲ್ಲ ಮಹಿಳೆಯರೊಂದಿಗೆ ಹಂಚಿಕೊಳ್ಳುವಂತೆ ನನ್ನನ್ನು ಪ್ರೇರೇಪಿಸಿತು. ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್‌ನಲ್ಲಿ ಅದೊಂದು ಸಾಮಾನ್ಯ ದಿನವಾಗಿತ್ತು. ನಾನು ಎರಡು ಶಸ್ತ್ರಕ್ರಿಯೆಗಳನ್ನು ಮುಗಿಸಿದ್ದೆ. ಹಾಗೂ ರೋಗಿಗಳು ಸಲಹೆ ಪಡೆಯಲು ಸಾಲಾಗಿ ನಿಂತು ಕಾದಿದ್ದ ಹೊರರೋಗಿ ವಿಭಾಗದಲ್ಲಿದ್ದೆ.

ಯಶಸ್ಸಿನ ಕಥೆಯಾಗಿದ್ದ ಮೊದಲ ರೋಗಿಯೊಂದಿಗೆ ನಾನು ತಪಾಸಣೆ ಆರಂಭಿಸಿದ್ದೆ. ಬಿಜಿಎಸ್ ಗ್ಲೋಬಲ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನ ಸಮಯಕ್ಕೆ ಸರಿಯಾದ ಪ್ರಯತ್ನ ಹಾಗೂ ರೋಗಿಯ ಎಚ್ಚರಿಕೆ ಇದಕ್ಕೆ ಕಾರಣವಾಗಿತ್ತು. ಸ್ತನ ಕ್ಯಾನ್ಸರ್‌ನಿಂದ ನೀಲಿಮಾ ಸಂಪೂರ್ಣ ಗುಣಮುಖಳಾಗಿದ್ದಳು. ಚಿಕಿತ್ಸಾನಂತರದ ಆಕೆಯ ವೈದ್ಯಕೀಯ ವರದಿಗಳು ಸಂಪೂರ್ಣ ಸಾಮಾನ್ಯವಾಗಿದ್ದವು ಎಂದು ಆಕೆಗೆ ಹೇಳಿದಾಗ ಅವಳ ಆನಂದಕ್ಕೆ ಪಾರವೇ ಇರಲಿಲ್ಲ.

ಆ ದಿನ ಇನ್ನೂ ಕೆಲವು ರೋಗಿಗಳ ಸಾಮಾನ್ಯ ತಪಾಸಣೆಯೊಂದಿಗೆ ಮುಂದುವರಿದಿತ್ತು. ಕೆಲಸ ಸುಲಲಿತವಾಗಿ ಸಾಗಿತ್ತು. ಸಣ್ಣ ಕಾಫೀ ಬ್ರೇಕ್ ತೆಗೆದುಕೊಳ್ಳುತ್ತಿದ್ದಾಗ ಮುಂದಿನ ಒಂದು ಗಂಟೆಯಲ್ಲಿ ಏನನ್ನು ಎದುರಿಸಬೇಕಾಗುತ್ತದೆ ಎಂದು ನಾನು ಯೋಚಿಸಿರಲೇ ಇಲ್ಲ. ಹೊರರೋಗಿ ವಿಭಾಗದ ಕಡೆಗೆ ತೆರಳುವಾಗ ಒಬ್ಬ ರೋಗಿ ಗಾಲಿ ಕುರ್ಚಿಯಲ್ಲಿ ನನ್ನ ಚೇಂಬರ್ ಕಡೆಗೆ ಬರುವುದನ್ನು ಕಂಡೆ. ಆಕೆಗೆ ಬಹಳ ಏದುಸಿರು ಬರುತ್ತಿತ್ತು. ಮುಂದಿನ 30 ನಿಮಿಷಗಳಲ್ಲಿ ಆಕೆಯ ದೇಹ ತಣ್ಣಗಾಗುತ್ತಿತ್ತು. ಸಮಯ ನಿಶ್ಚಲವಾಗಿತ್ತು.

ರಜನಿ 47 ವರ್ಷ ವಯಸ್ಸಿನವರಾಗಿದ್ದು ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಅತ್ಯುನ್ನತ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದರು. ಉತ್ತಮ ಶಿಕ್ಷಣ ಹೊಂದಿದ್ದ ಅವರು ಬಹಳಷ್ಟು ಓದಿಕೊಂಡಿದ್ದರು. ಬಹಳಷ್ಟು ಗ್ರಾಹಕರನ್ನು ಭೇಟಿಯಾಗುವ ಕೆಲಸದಲ್ಲಿದ್ದ ಅವರ ಬಳಿ ಅನೇಕ ವಿಷಯಗಳಲ್ಲಿ ಸಲಹೆ ಪಡೆಯಲು ಮನೆಮಂದಿ ಮತ್ತು ಸ್ನೇಹಿತರು ಬರುತ್ತಿದ್ದರು. ಎಂಟು ತಿಂಗಳ ಹಿಂದೆ ಆಕೆಯ ಬಲಗೈ ಊದಿಕೊಂಡಿತ್ತಲ್ಲದೇ ಬಲ ಸ್ತನದಲ್ಲಿ ಅನಾನುಕೂಲಕರ ಅನುಭವವಾಗಿತ್ತು. ಇದು ಮುಟ್ಟು ನಿಲ್ಲುವ ಸಮಯದ ಲಕ್ಷಣ ಎಂದು ಆಕೆ ಭಾವಿಸಿದರಲ್ಲದೇ ಹೋಮಿಯೋಪತಿ ವೈದ್ಯರನ್ನು ಸಂಪರ್ಕಿಸಿದ್ದರು. ಆ ವೈದ್ಯರು ಇವರಿಗೆ ಆರು ತಿಂಗಳ ಕಾಲ ಚಿಕಿತ್ಸೆ ನೀಡಿದ್ದರು.






ಲೇಖಕರು :

**ಡಾ|| ಜಯಂತಿ ತುಮ್ಸಿ**

ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು

ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್

ದೂ : 94834 00000


ಆಕೆಗೆ ಯಾವುದೇ ರೀತಿಯ ಗುಣ ಕಾಣಲಿಲ್ಲ. ಆದರೆ ಕೆಲ ಸಮಯದ ನಂತ ಗುಣವಾಗುವುದಾಗಿ ಆಕೆಗೆ ಹೇಳಲಾಗಿತ್ತು. ನಂತರ ಬಲ ಸ್ತನದ ಮೇಲಿನ ತ್ವಚೆಯಲ್ಲಿ ಸಣ್ಣ ಸಣ್ಣ ಕೆಂಪು ಗುಳ್ಳೆಗಳಾಗಿದ್ದವು. ತ್ವಚೆಯ ಅಲರ್ಜಿಗಾಗಿ ಆಕೆ ಸುಮಾರು 8 ತಿಂಗಳುಗಳ ಕಾಲ ಚಿಕಿತ್ಸೆ ಪಡೆದಿದ್ದರು. ನಂತರ ಇದ್ದಕ್ಕಿದ್ದಂತೆ ಏದುಸಿರು ಕಂಡು ಬಂದು ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ನನ್ನನ್ನು ಭೇಟಿಯಾಗಿದ್ದರು. ನನ್ನ ತಂಡ ಆಕೆಯನ್ನು ಪರಿಶೀಲಿಸಿತು. ಹಲವಾರು ತಪಾಸಣೆಗಳ ನಂತರ ಉನ್ನತ ಹಂತದ ಸ್ತನ ಕ್ಯಾನ್ಸರ್‌ನಿಂದ ಆಕೆ ಬಳಲುತ್ತಿದ್ದಾಳೆ ಎಂಬ ನಿರ್ಣಯಕ್ಕೆ ಬರಲಾಯಿತು. ಆಕೆಯ ಶ್ವಾಸಕೋಶ, ಪಿತ್ತಜನಕಾಂಗ, ಮೂಳೆಗಳಿಗೆ ಕ್ಯಾನ್ಸರ್ ಹರಡಿದ್ದು, ಅದರಿಂದ ಏದುಸಿರು ಬರುವಂತಾಗಿತ್ತು. ಆಕೆಯ ಸಂಪೂರ್ಣ ಸ್ತನ ತ್ವಚೆಯೂ ಸೇರಿದಂತೆ ಒಂದು ಮಾಂಸದ ಉಂಡೆಯಾಗಿತ್ತು. ಆಕೆಗೆ ಸೂಕ್ತ ರೀತಿಯ ಚಿಕಿತ್ಸೆ ನೀಡುವಲ್ಲಿ ಪ್ರಮುಖ ಹಾಗೂ ಅಮೂಲ್ಯ ಸಮಯ ನಷ್ಟವಾಗಿತ್ತು ಎನ್ನುವುದು ಮತ್ತಷ್ಟು ಮನ ಕಲಕುವ ವಿಷಯವಾಗಿತ್ತು.

ಆಕೆಯ ನಂತರ 45 ವರ್ಷ ವಯಸ್ಸಿನ ಮತ್ತೊಬ್ಬ ರೋಗಿ ಬಂದಿದ್ದಳು. ಗುಲ್ಬರ್ಗಾ ಬಳಿಯ ಸಣ್ಣ ಹಳ್ಳಿಯಿಂದ ಬಂದ ಆಕೆ ಅಶಿಕ್ಷಿತಳಾಗಿದ್ದು, ಅವಿವಾಹಿತಳಾಗಿ ತನ್ನ ವಯಸ್ಸಾದ ತಂದೆ ಹಾಗೂ ಅಣ್ಣನೊಂದಿಗೆ ಮನೆಯಲ್ಲೇ ಇರುತ್ತಿದ್ದಳು. ಆಕೆಗೆ ಮನೆಯೇ ಜಗತ್ತಾಗಿತ್ತು. ಆಕೆಯನ್ನು ನಾನು ಪರಿಶೀಲಿಸಿ ನೋಡಿದಾಗ ಸ್ತನದಿಂದ ಹೊರಕ್ಕೆ ಚಾಚಿಕೊಂಡ ದೊಡ್ಡ ಮಾಂಸದ ಉಂಡೆ ಇದ್ದು, ಅದು ಒಂದು ವರ್ಷದಿಂದ ಹಾಗೆಯೇ ಇತ್ತೆಂದು ತಿಳಿದು ಬಂದಿತ್ತು. ಮುಟ್ಟಿದರೆ ರಕ್ತಸ್ರಾವವಾಗುವ ಇಂಥ ಮಾಂಸದ ಉಂಡೆಯೊಂದಿಗೆ ಆಕೆ ಹೇಗೆ ಜೀವಿಸಿದ್ದಳು? ಎಂಬುದು ನನಗೆ ಅಚ್ಚರಿಯ ವಿಷಯವಾಗಿತ್ತು. ಆಕೆಯ ಕುಟುಂಬದಲ್ಲಿ ಯಾರೂ ಮಹಿಳೆಯರು ಇರಲಿಲ್ಲ. ಆದ್ದರಿಂದ ಈ ವಿಷಯವನ್ನು ಹಂಚಿಕೊಳ್ಳಲು ಅವಳಿಗೆ ನಾಚಿಕೆಯಾಗಿತ್ತು. ಅಲ್ಲದೇ ಕಳೆದ 12 ತಿಂಗಳಿಂದ ನೋವು ಅನುಭವಿಸಿಕೊಂಡಿದ್ದಳು.

ಆ ದಿನ ಎಷ್ಟು ಆರಾಮವಾಗಿ ಆರಂಭವಾಗಿತ್ತಾದರೂ, ಅಂತಿಮವಾಗಿ ಹೃದಯ ಭಾರವಾಗಿ ಅಂತ್ಯವಾಗಿತ್ತು. ರಜಿನಿ ಮತ್ತು ದೀಪಾ ಇಬ್ಬರೂ ಒಂದೇ ವಯಸ್ಸಿನವರಲ್ಲದೇ ಒಂದೇ ರೋಗ ಹೊಂದಿದ್ದರು. ಇಬ್ಬರು ಮಹಿಳೆಯರು ಬದುಕಿನ ವಿಭಿನ್ನ ಹಂತಗಳಿಂದ ಬಂದವರು. ಈ ವಿಷಯ ನನ್ನನ್ನು ಚಿಂತೆಗೀಡು ಮಾಡಿತ್ತು. ಒಬ್ಬರು ಶಿಕ್ಷಿತರಾಗಿದ್ದರೆ, ಇನ್ನೊಬ್ಬರು ಅಶಿಕ್ಷಿತರು, ಆದರೆ ಅವರಲ್ಲಿ ನಿಜಕ್ಕೂ ವ್ಯತ್ಯಾಸವಾದರೂ ಏನು? ಜಾಗೃತಿಯೇ ಇಲ್ಲದಿದ್ದರೆ ಶಿಕ್ಷಣದ ಉಪಯೋಗವಾದರೂ ಏನು? ಇದು ಎಲ್ಲ ಮಹಿಳೆಯರಿಗೆ ಎಚ್ಚರಿಕೆಯ ಗಂಟೆ ಎಂದು ನನ್ನ ಭರವಸೆ. ಈಗ ನಾವು ಸ್ತನಕ್ಯಾನ್ಸರ್ ಬಗ್ಗೆ ಕೆಲವು ವಾಸ್ತವಾಂಶಗಳನ್ನು ತಿಳಿದುಕೊಳ್ಳೋಣ.

ಮಹಿಳೆಯರಲ್ಲಿ ಎರಡನೇ ಅತ್ಯಂತ ಬೃಹತ್ ಪ್ರಮಾಣದಲ್ಲಿ ಕಂಡದು ಬರುವ ಕ್ಯಾನ್ಸರ್ ಈ ಸ್ತನ ಕ್ಯಾನ್ಸರ್ ಆಗಿದೆ. 28 ಭಾರತೀಯ ಮಹಿಳೆಯರಲ್ಲಿ ಒಬ್ಬ ಮಹಿಳೆ ಸ್ತನ ಕ್ಯಾನ್ಸರ್‌ಗೆ ಗುರಿಯಾಗುತ್ತಾರೆ. ಶೀಘ್ರವಾಗಿ ಪತ್ತೆ ಮಾಡಿ ಚಿಕಿತ್ಸೆ ನೀಡಿದಲ್ಲಿ ಸ್ತನ ಕ್ಯಾನ್ಸರ್ ಸಂಪೂರ್ಣ ಗುಣವಾಗಬಹುದು. 40 ವರ್ಷ ಮೇಲ್ಪಟ್ಟ ಎಲ್ಲ ಮಹಿಳೆಯರು ವರ್ಷಕ್ಕೊಮ್ಮೆ ಸ್ತನ ಕ್ಯಾನ್ಸರ್‌ಗಾಗಿ ಮ್ಯಾಮೊಗ್ರಾಮ್ ಪರೀಕ್ಷೆಗೆ ಒಳಗಾಗಬೇಕು. 20 ವರ್ಷ ಮೇಲ್ಪಟ್ಟ ಎಲ್ಲ ಮಹಿಳೆಯರು ಪ್ರತೀ ತಿಂಗಳು ತನ್ನ ಸ್ತನವನ್ನು ಸ್ವಯಂ ಪರೀಕ್ಷೆ ಮಾಡಿಕೊಳ್ಳಬೇಕು.

ನೀಲಿಮಾಳಂತೆ ಪ್ರತಿ ರೋಗಿ ಸಂಪೂರ್ಣ ಗುಣಮುಖರಾಗಿ ನಗುನಗುತ್ತಾ ಸಾಮಾನ್ಯ ಜೀವನಕ್ಕೆ ಹಿಂದಿರುಗುವುದನ್ನು ಪ್ರತೀ ವೈದ್ಯರು ಬಯಸುತ್ತಾರೆ. ನಿರ್ಲಕ್ಷ್ಯ, ಅಜ್ಞಾನ, ಮತ್ತು ಗಮನ ನೀಡದೇ ಸೂಕ್ತ ಚಿಕಿತ್ಸೆ ಪಡೆಯದೇ ಸೋಲು ಕಂಡ ರಜನಿ ಮತ್ತು ದೀಪರಂಥ ಮಹಿಳೆಯರನ್ನು ನೋಡಿದಾಗ ಬಹಳ ನೋವಾಗುತ್ತದೆ.

ನನ್ನ ಪ್ರತಿ ರೋಗಿ ಈ ರೋಗದಿಂದ ಗುಣ ಹೊಂದಿ, ಒಬ್ಬ ತಾಯಿಯಾಗಿ, ಪತಿಯಾಗಿ, ಗೃಹಿಣಿಯಾಗಿ, ವೃತ್ತಿಪರಳಾಗಿ ಎಲ್ಲದಕ್ಕೂ ಮುಖ್ಯವಾಗಿ ಅರ್ಥಪೂರ್ಣ ವ್ಯಕ್ತಿಯಾಗಿ ನಗುನಗುತ್ತಾ ಜೀವನ ಸಾಗಿಸುವುದನ್ನು ನಾನು ಬಯಸುತ್ತೇನೆ.